## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮೂಡಬಿದ್ರೆ, ದ.ಕ.

ದಿನಾಂಕಃ 13 ನೇ ದಿವಸ ಜೂನ್ ತಿಂಗಳ 2019 ನೇ ಇಸ್ವಿಯಂದು

**ಅಪರಾಧ ಮೊಕದ್ದಮೆ ಸಂಖ್ಯೆ: 201/2018**

ಇವರೀರ್ವರ ನಡುವೆ:

ಕರ್ನಾಟಕ ಸರ್ಕಾರದ ಪರವಾಗಿ
ಆರಕ್ಷಕ ನಿರೀಕ್ಷಕರು
ಮೂಡಬಿದ್ರೆ ಪೊಲೀಸ್ ಠಾಣೆ, ಮೂಡಬಿದ್ರೆ. .... ಫಿರ್ಯಾದುದಾರರು

– ಮತ್ತು –

ಲೋಕೇಶ್ ಶೆಟ್ಟಿಗಾರ್, 19 ವರ್ಷ,
ತಂದೆಃ ಜಯಕುಮಾರ್,
ಕೇರ್ ಆಫ್ಃ ಲಿಂಗಪ್ಪ ಪೂಜಾರಿ,
ಉರ್ಕಿ, ಬಡಗ ಎಡಪದವು ಗ್ರಾಮ,
ಮಂಗಳೂರು ತಾಲ್ಲೂಕು. ..... ಆರೋಪಿತ

******

## ದೋಷಾರೋಪಣೆ

ಶ್ರೀ ಯಶವಂತ ಕುಮಾರ್ ಆರ್., ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮೂಡಬಿದ್ರೆ, ದ.ಕ. ಆದ ನಾನು ಮೇಲ್ಕಂಡ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆ :-

ಆರೋಪಿಯಾದ ನೀವು, ದಿನಾಂಕ 25-09-2017 ರಂದು ಬೆಳಿಗ್ಗೆ 11.45 ಮಧ್ಯಾಹ್ನ 15.00 ಗಂಟೆ ಸಮಯಕ್ಕೆ ಮೂಡಬಿದ್ರೆ ಠಾಣಾ ವ್ಯಾಪ್ತಿಯ ಮಂಗಳೂರು ತಾಲೂಕು ಪ್ರಾಂತ್ಯ ಗ್ರಾಮದ ಹೊಸಮನೆ ಎಂಬಲ್ಲಿ ಸಾಕ್ಷಿ 1 ನೇ ವಿಜಯ ಕುಮಾರ್ ರವರ ಮನೆಯಲ್ಲಿ ಯಾರೂ ಇಲ್ಲದ ಸಮಯ ಮನೆಯ ಬಾಗಿಲಿನ ಬೀಗ ಹಾಕಿದ ಚಿಲಕದ ಕೊಂಡಿಯನ್ನು ಕಿತ್ತು ಬಾಗಿಲನ್ನು ತೆರೆದು ಒಳ ಪ್ರವೇಶಿಸಿ ಮನೆಯ ಒಳಗಿದ್ದ ಕಬ್ಬಿಣದ ಕಪಾಟಿನ ಲಾಕರನ್ನು ಬಲವಂತವಾಗಿ ತೆರೆದು ಅದರಲ್ಲಿದ್ದ ಸುಮಾರು ರೂ.2 ಲಕ್ಷ ಬೆಲೆಯ ಬಂಗಾರದ ಕರಿಮಣಿ ಸರ, ಬಂಗಾರದ ಹವಳದ ಚೈನ್, ಬಂಗಾರದ ಎರಡು

ಉಂಗುರ ಮತ್ತು ನಗದು ರೂ.10,000 ಮೊದಲಾದ ಸೊತ್ತುಗಳನ್ನು ಕಳವು ಮಾಡಿಕೊಂಡು ಹೋಗಿರುತ್ತೀರಿ. ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ 454 ಮತ್ತು 380 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆ 1ಃ- ಮೇಲೆ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೋ ಹೇಗೆ?
ಉತ್ತರಃ-

ಪ್ರಶ್ನೆ 2ಃ- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಲು ಬಯಸುವಿರೋ?
ಉತ್ತರಃ-

(ಮೇಲಿನ ದೋಷಾರೋಪಣೆಯ ಸಾರವನ್ನು ಆರೋಪಿತನಿಗಿಂದು ಮುಕ್ತ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಲಾಗಿದ್ದು ಅದನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡು ನೀಡಿದ ಯಥಾವತ್ ಹೇಳಿಕೆಯನ್ನು ದಾಖಲು ಮಾಡಲಾಯ್ತು.)

(ಯಶವಂತ ಕುಮಾರ್ ಆರ್.)
ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ., ಮೂಡಬಿದ್ರಿ

ಆರೋಪಿಯ ರುಜುಃ